**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 289/2013** **CW-4** **PW-4**

**ಸಾಕ್ಷಿಯನ್ನು ದಿಃ 15.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶಿವಕುಮಾರ್ |
| ತಂದೆಯ ಹೆಸರುಃ | ಮಲ್ಲೇಶ |
| ವಯಸ್ಸುಃ | 35 ವರ್ಷ |
| ವೃತ್ತಿಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಜನಿವಾರ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ -1 ನನ್ನ ತಂದೆ. ಚಾಸಾ-2 ನನ್ನ ತಾಯಿ. ಚಾಸಾ-3 ನನ್ನ ಅಕ್ಕ. ಚಾಸಾ-5 ರಿಂದ 8 ರವರ ಪರಿಚಯವಿದೆ. ಆರೋಪಿ ನನ್ನ ದೊಡ್ಡಪ್ಪ .

ದಿಃ 06.11.2012 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ನಾನು ನನ್ನ ಮನೆಯ ಒಳಗೆ ಪೂಜೆ ಮಾಡುತ್ತಿದ್ದಾಗ ಚಾಸಾ-1 ರವರು ಮನೆಗೆ ಹೊಂದಿಕೊಂಡಂತೆ ಇರುವ ಅಂಗಡಿಯಲ್ಲಿದ್ದು, ಚಾಸಾ-2 ಮತ್ತು ಚಾಸಾ-3 ರವರು ಮನೆಯ ಒಳಗೆ ಇದ್ದು, ಗಲಾಟೆ ಶಬ್ದ ಕೇಳಿಸಿಕೊಂಡು ಚಾಸಾ-2 ಮತ್ತು ಚಾಸಾ-3 ರವರು ಹೊರಗೆ ಹೋಗಿ ನೋಡುತ್ತಿದ್ದು, ನಾನು ಹೊರಗೆ ಬಂದು ನೋಡಿದಾಗ ಚಾಸಾ-1 ಮತ್ತು ಚಾಸಾ-2 ರವರು ಮನೆಯ ಹೊರಗಡೆ ಬಿದ್ದಿದ್ದರು. ನನ್ನ ತಂದೆ ಚಾಸಾ-1 ರವರಿಗೆ ಎಡಹೊಟ್ಟೆಗೆ ಚಾಕುವಿನಿಂದ ಪೆಟ್ಟಾಗಿದ್ದು, ಚಾಸಾ-2 ರವರ ಎಡಕಪಾಳಕ್ಕೆ ಚಾಕುವಿನಿಂದ ಪೆಟ್ಟಾಗಿತ್ತು ಹಾಗೂ ಚಾಸಾ-3 ರವರಿಗೆ ಎಡತೊಳಿಗೆ ಚಾಕುವಿನಿಂದ ಪೆಟ್ಟಾಗಿತ್ತು. ನಂತರ ನಾನು ಚಾಸಾ-1 ರಿಂದ ಚಾಸಾ-3 ರವರನ್ನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತೇನೆ. ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಎಸ್ ಎಸ್ ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-1 ರವರನ್ನು

ಆಸ್ಪತ್ರೆಯಲ್ಲಿ ವಿಚಾರಿಸಿದಾಗ ಮಂಜುನಾಥ್ ರವರ ಮಗ ಮನೋಜ್ ರವರು ನಮ್ಮ ಮನೆಯ ಮೇಲೆ ಬಾಲನ್ನು ಎಸೆದಿದ್ದು, ನಿನ್ನ ತಂದೆಯನ್ನು ಕರೆದುಕೊಂಡು ಬಾ ಎಂದು ಎದರಿಸಿ ಕಳುಹಿಸಿದ್ದು, ಆ ಸಮಯದಲ್ಲಿ ಆರೋಪಿ ಚಾಕುವಿನಿಂದ ಚಾಸಾ-1 ರಿಂದ ಚಾಸಾ-3 ರವರಿಗೆ ಚಾಕುವಿನಿಂದ ಗಾಯಪಡಿಸಿರುತ್ತಾರೆ ಎಂದು ತಿಳಿಸಿದರು. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಮು ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನ್ನ ಹೇಳಿಕೆಯಲ್ಲಿ ಆರೋಪಿ ಮತ್ತು ನನ್ನ ತಂದೆಯ ನಡುವೆ ಮನೆಯ ವಿಚಾರವಾಗಿ ಮನಃಸ್ತಾಪ ಇತ್ತು ಎಂದು ಬರೆಸಿದ್ದೇನೆ ಎಂದರೆ ಸರಿ. ಚಾಸಾ-5 ಮತ್ತು ಚಾಸಾ-6 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿ ಚಾಸಾ-1 ರಿಂದ ಚಾಸಾ-3 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಸ್ ಡಿ ರವರಿಂದ ಃ**

ಆ ದಿನ ಆರೋಪಿಗೂ ಗಾಯವಾಗಿತ್ತು ಎಂದರೆ ಸಾಕ್ಷಿ 4 ಜನ ಅಲ್ಲಿ ಬಿದ್ದಿದ್ದರು ಎನ್ನುತ್ತಾರೆ. ನಮ್ಮ ಮತ್ತು ಆರೋಪಿಯ ಮಧ್ಯೆ ನಾನು ಹುಟ್ಟಿದಾಗಿನಿಂದಲು ಮಾತುಕತೆ ಇಲ್ಲ. ಆರೋಪಿ ಚಾಸಾ-1 ರವರ ವಿರುದ್ದ ಒಂದು ಕ್ರಿಮಿನಲ್ ಪ್ರಕರಣ ಹೂಡಿದ್ದರು ಎಂದರೆ ಸರಿ. ಈಗಲೂ ನಮ್ಮ ನಡುವೆ ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿ. ನಮ್ಮ ಮತ್ತು ಆರೋಪಿಯ ನಡುವೆ ಮನೆ ರಿಪೇರಿ ಮಾಡುವ ಸಮಯದಲ್ಲಿ ದ್ವೇಷ ಉಂಟಾಗಿದ್ದು ದಿನಾಂಕ ನೆನಪಿಲ್ಲ. ನಮ್ಮ ಮತ್ತು ಆರೋಪಿಯ ಮನೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ನಮ್ಮ ಮನೆಯ ಮುಂದು ಮುಖ್ಯ ರಸ್ತೆ ಇದ್ದು, ಹೆಚ್ಚು

ಜನ ಓಡಾಡುತ್ತಾರೆ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸ್ಥಳದಲ್ಲಿ ಸುಮಾರು 20–30 ಜನ ಇದ್ದರು. ಅವರ ಹೆಸರುಗಳನ್ನು ಹೇಳಲಾಗುವುದಿಲ್ಲ. ಚಾಸಾ–5 ನನ್ನ ಅಣ್ಣ. ಚಾಸಾ–6 ಮತ್ತು ಚಾಸಾ–7 ರವರು ನಮ್ಮ ಆತ್ಮೀಯರು ಎಂದರೆ ಸರಿ. ಹಾಸನದ ಆಸ್ಪತ್ರೆಗೆ ಹೋದ ಸಮಯ ನೆನಪಿಲ್ಲ. ಘಟನೆಯ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದರೆ ಸರಿ. ಮು ಮಾ–1 ರ ರೀತಿಯ ಚಾಕು ಎಲ್ಲಾ ಕಡೆ ದೊರೆಯುತ್ತವೆ ಎಂದರೆ ಸರಿ. ಮು ಮಾ–1 ಕ್ಕೆ ವಿಶೇಷ ಗುರುತು ಇಟ್ಟಿಲ್ಲ ಎಂದರೆ ಸರಿ. ಘಟನೆ ಸಂಬಂಧ ಆರೋಪಿ ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ಹೂಡಿದ್ದಾರೆ ಎಂದರೆ ಸರಿ. ಆರೋಪಿ ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ಹೂಡಿದ್ದರಿಂದ ಅದಕ್ಕೆ ಪ್ರತಿಯಾಗಿ ಚಾಸಾ–1 ರವರು ಈ ಪ್ರಕರಣವನ್ನು ಹೂಡಿದ್ದು ನಾನು ಈ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**